ಪ್ರಮಾಣ ವಚನ ಬೋಧಿಸಿದ ದಿನಾಂಕ:**03.07.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎ.ಕೆ. ವಕೀಲರಿಂದ**

ಆಲಂಬಿ ಮತ್ತು ಅವರ ಮಕ್ಕಳ ನಡುವೆ ವಿಭಾಗವಾಗಿದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವಿಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ನೀಡದೆ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಗೆ ಪಿತ್ರಾರ್ಜಿತ ಆಸ್ತಿ ಆಗಬೇಕು ಎಂದರೆ ಸಾಕ್ಷಿಯು ಅವರ ತಾಯಿಗೆ ಮಂಜೂರಾಗಿರುವ ಆಸ್ತಿ ಎಂದು ಹೇಳುತ್ತಾರೆ. ವಾದಿಯು ಹಿರಿಯ ಮಗನಾಗಿರುವ ಕಾರಣ ಎ.ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ತಾಯಿಯ ಹೆಸರಿನಲ್ಲಿ ದಾವಾ ಆಸ್ತಿಯನ್ನು ಮಂಜೂರು ಮಾಡಿಸಿದ್ದಾರೆಂದರೆ ಗೊತ್ತಿಲ್ಲ. **1983** ರಲ್ಲಿ **1** ಮತ್ತು **2** ನೇ ಪ್ರತಿವಾದಿಯರು ಅಪ್ರಾಪ್ತ ವಯಸ್ಕರು ಎಂದರೆ ಗೊತ್ತಿಲ್ಲ. ಆಗ ವಾದಿ ಒಬ್ಬರೇ ಸಂಪಾದಿಸುತ್ತಿದ್ದರು ಎಂದರೆ ಗೊತ್ತಿಲ್ಲ. ಆಲಂಬಿ ಅವರು ಗೃಹಿಣಿ ಆಗಿದ್ದರು ಹಾಗೂ ಅವರಿಗೆ ಯಾವುದೇ ಸಂಪಾದನೆ ಇರಲಿಲ್ಲ ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಯನ್ನು ಖರೀದಿಸಿದ ನಂತರ ಮೂಲ ಸಾಗುವಳಿ ಚೀಟಿಯನ್ನು ಪಡೆದುಕೊಂಡಿದ್ದೀರಾ? ಎಂದರೆ ಹೌದು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ? ಎಂದರೆ ಗೊತ್ತಿಲ್ಲ. ನಾನು ಆ ರೀತಿ ಯಾವುದೇ ಸಾಗುವಳಿ ಚೀಟಿ ಪಡೆದುಕೊಂಡಿಲ್ಲ ಹಾಗೂ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ **01.12.2004** ರಲ್ಲಿ ವಾದಿ, **1** ಮತ್ತು **2** ನೇ ಪ್ರತಿವಾದಿಯರ ನಡುವೆ ಯಾವುದೇ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ನಾನು ವಿಭಾಗಕ್ಕೆ ಸಂಬಂಧಿಸಿದ ದಾಖಲೆಯನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

ಕರೀಮ್ ಸಬ್ ಮತ್ತು ಆಂಬಿಯವರಿಗೆ 5 ಜನ ಮಕ್ಕಳಿದ್ದಾರೆಂದರೆ ಸರಿ. ಸದರಿ 5 ಜನರು ಸೇರಿ ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿ ವಾದಿಯ ಸಹಿ ಇಲ್ಲ ಎಂದರೆ ಸರಿಯಲ್ಲ. ವಾದಿಯ ಭಾಗವನ್ನು ಮಾರಾಟ ಮಾಡಲು 1 ನೇ ಪ್ರತಿವಾದಿಗಾಗಲೀ, ಬಾಷಾಸಾಬ್ ಅಥವಾ ಚೋಟಾಸಾಬ್‌ರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ:29.05.2006 ರ ಕ್ರಯಪತ್ರವು ಸೃಷ್ಟಿತವಾಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಕ್ಕೆ ವಾದಿಯು ಸಹಿ ಮಾಡದೇ ಇದ್ದರೂ ಕೂಡ ಅವರ ಸಹಿಯನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ದಿನಾಂಕ:29.05.2006 ರ ಕ್ರಯಪತ್ರದ ಬಗ್ಗೆ ಇ.ಸಿ.ಯಲ್ಲಿ ಯಾವುದೇ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ದಿನಾಂಕ:29.05.2006 ರಲ್ಲಿ ಯಾವುದೇ ಕ್ರಯಪತ್ರವು ನೋಂದಣಿಯಾಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಿನಾಂಕ:27.06.2007 ರ ಕ್ರಯಪತ್ರವು ಕೂಡ ಕಾನೂನಿನ ಅಡಿ ಯಾವುದೇ ಮಾನ್ಯತೆ ಹೊಂದಿಲ್ಲ ಹಾಗೂ ವಾದಿಯ ಭಾಗಕ್ಕೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ಹಣ ಮತ್ತು ರಾಜಕೀಯ ಪ್ರಭಾವದಿಂದ ದಾಖಲೆಯನ್ನು ಸೃಷ್ಟಿ ಮಾಡಿದ್ದರೆಂದರೆ ಸರಿಯಲ್ಲ. ಈಗಲೂ ಕೂಡ ವಾದಿ ಮತ್ತು ಅವರ ಹೆಂಡತಿ ದಾವಾ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದಾರೆಂದರೆ ಸರಿಯಲ್ಲ. ನಾವು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದೇವೆಂದು ದಾಖಲೆಯನ್ನು ಹಾಜರುಪಡಿಸಿದ್ದೇವೆ. ಯಾವ ದಾಖಲೆ ಹಾಜರುಪಡಿಸಿದ್ದೇವೆಂದು ಹೇಳಲು ಆಗುವುದಿಲ್ಲ. ನಾವು ಖರೀದಿ ಮಾಡಿದ್ದೇವೆಂದು ಹೇಳುವ ಸ್ವತ್ತಿನಲ್ಲಿ ವಾದಿಗೆ ಹಕ್ಕಿದೆ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಗೆ ನೀವೇ ಕೊಡಿಸಿದ್ದೀರಾ? ಎಂದರೆ ಇಲ್ಲ. ನಮ್ಮ ಊರಿನಿಂದ ದಾವಾ ಆಸ್ತಿಯು ಐದಾರು ಕಿ.ಮೀ ದೂರದಲ್ಲಿದೆ. ದಾವಾ ಆಸ್ತಿಗೂ ನಮಗೂ ಯಾವುದೇ ಸಂಬಂಧಇಲ್ಲದೇ ಇದ್ದರೂ ಕೂಡ ಆಂಧ್ರದಲ್ಲಿರುವ 5 ನೇ ಪ್ರತಿವಾದಿ ಕಡೆಯಿದ ಜಿ.ಪಿ.ಎ ಪತ್ರವನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿಯನ್ನು

ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗಲೂ ಕೂಡ ವಾದಿಯೇ ದಾವಾ ಆಸ್ತಿಯನ್ನು ಸ್ವಾಧೀನ ಹೊಂದಿ ರಾಗಿ ಮತ್ತು ಜೋಳ ಬೆಳೆಯುತ್ತಿದ್ದಾರೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಅಸ್ತಿಯಲ್ಲಿ ಕೇವಲ ಬೇವಿನ ಗಿಡಗಳು ಇವೆ ಹಾಗೂ ಅಲ್ಲಿ ರಾಗಿ ಮತ್ತು ಜೋಳ ಬೆಳೆಯುತ್ತಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ದಾವಾ ಆಸ್ತಿಯ ಪಹಣಿಯನ್ನು ತೋರಿಸಿ ಅದರಲ್ಲಿ ರಾಗಿ ಬೆಳೆ ಬೆಳೆಯುವ ಬಗ್ಗೆ ತಹಶೀಲ್ದಾರ್‌ರವರು ನಮೂದು ಮಾಡಿದ್ದಾರೆಂದು ಹೇಳಿದಾಗ ಸಾಕ್ಷಿಯು ಹೌದು ಎಂದು ಹೇಳುತ್ತಾರೆ. ದಾವಾ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಕೂಡ ದಾವಾ ಆಸ್ತಿಯನ್ನು ಅಕ್ರಮವಾಗಿ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.